


ಒಂದು ದಿನ ತಾಯಿಯು ನಿದ್ರಿಸುತ್ತಿರುವ ತನ್ನ ಮಗನನ್ನು ಎಬ್ಬಿಸಲು ಶತ ಪ್ರಯತ್ನ ಮಾಡುತ್ತಿದ್ದಳು.
ತಾಯಿ: ಬೇಗ ಏಳು, ನೀನು ಸ್ಕೂಲಿಗೆ ಹೋಗುವ ಸಮಯವಾಗಿದೆ.
ಮಗ: ಅಮ್ಮಾ, ನಾನು ಯಾಕೆ ಸ್ಕೂಲಿಗೆ ಹೋಗಬೇಕು? ನಂಗೆ ಹೋಗಲು ಇಷ್ಟವಿಲ್ಲ.
ತಾಯಿ: ಯಾಕೆ ನೀನು ಶಾಲೆಗೆ ಹೋಗಲ್ಲ ? ಎರಡು ಕಾರಣಗಳನ್ನು ಕೊಡು.
ಮಗ: ಮೊದಲನೇ ಕಾರಣ ಎಲ್ಲಾ ಮಕ್ಕಳೂ ನನ್ನನ್ನು ದ್ವೇಷಿಸುತ್ತಾರೆ. ಎರಡನೇ ಕಾರಣ ಎಲ್ಲಾ ಟೀಚರ್‌ಗಳೂ ನನ್ನನ್ನು ದ್ವೇಷಿಸುತ್ತಾರೆ.
ತಾಯಿ: ಓಹ್, ಅದೆಲ್ಲಾ ಸರಿಯಲ್ಲ. ನೀನು ಶಾಲೆಗೆ ಹೋಗಲೇ ಬೇಕು.
ಮಗ: ಯಾಕೆ ನಾನು ಶಾಲೆಗೆ ಹೋಗಲೇ ಬೇಕು, ನೀನು ಎರಡು ಕಾರಣ ಕೊಡು.
ತಾಯಿ: ಒಂದನೆಯ ಕಾರಣ ನೀನು 53 ವರ್ಷದ ಹಿರಿಯ. ನಿನ್ನ ಜವಾಬ್ದಾರಿಯನ್ನು ಅರ್ಥ ಮಾಡಿಕೊ. ಎರಡನೇ ಕಾರಣ ನೀನು ಸ್ಕೂಲಿನ ಪ್ರಿನ್ಸಿಪಾಲ್ ಆಗಿದ್ದೀಯಾ!

★★★



ನರಕದಲ್ಲಿರುವ ಗಂಡ ಅಲ್ಲಿದ್ದ ಪಿಶಾಚಿಯನ್ನು ಕೇಳಿದ: ನಾನು ಇಲ್ಲಿಂದ ನನ್ನ ಹೆಂಡತಿಗೆ ಫೋನ್ ಮಾಡಲೇ?
ಪಿಶಾಚಿ ಒಪ್ಪಿಗೆ ನೀಡಿದ ಮೇಲೆ ಆತ ಹೆಂಡತಿಗೆ ಕರೆ ಮಾಡಿದ.
ಬಳಿಕ ಕೇಳಿದ: ಎಷ್ಟು ಚಾರ್ಜು?
ಪಿಶಾಚಿ ಹೇಳಿತು: ನರಕದಿಂದ ನರಕಕ್ಕೆ ಫ್ರೀ ಕಾಲ್!

★★★

ಡಾಕ್ಟರ್: ನಿಮ್ಮ ಗಂಡನಿಗೆ ನಿದ್ರೆ ಹಾಗೂ ಶಾಂತಿಯ ಅವಶ್ಯಕತೆಯಿದೆ. ಅದಕ್ಕಾಗಿ ಈ ಮಾತ್ರೆಗಳನ್ನು ತೆಗೆದುಕೊಳ್ಳಿ.
ಹೆಂಡತಿ: ಇವುಗಳನ್ನು ಅವರಿಗೆ ಯಾವಾಗ ಕೊಡಬೇಕು ಡಾಕ್ಟರ್?
ಡಾಕ್ಟರ್: ಈ ಮಾತ್ರೆಗಳು ಅವರಿಗಲ್ಲ, ನಿಮಗೆ!

★★★

ಹುಡುಗಿ: ಮದುವೆಯಾದ ಮೇಲೂ ನನ್ನನ್ನು ಇದೇ ರೀತಿ ಪ್ರೀತಿಸುತ್ತೀಯಾ?
ಹುಡುಗ: ನಿನ್ನ ಗಂಡನ ಒಪ್ಪಿಗೆ ಸಿಕ್ಕರೆ ಮಾತ್ರ!

★★★

ಕಂಪನಿಯ ನೌಕರರೆಲ್ಲಾ ಆಕಾಶವೇ ಕಳಚಿ ತಲೆ ಮೇಲೆ ಬಿದ್ದಂತೆ ಚಿಂತೆಗೊಳಗಾಗಿದ್ದರು. ಆಫೀಸ್ ವೇಳೆಯಲ್ಲಿ ಕೆಲವರು ಅತ್ತಿಂದಿತ್ತ ಅಡ್ಡಾಡುತ್ತಿದ್ದರೆ, ಮತ್ತೆ ಕೆಲವರು ಜೋರಾಗಿ ಏನೋ ಚರ್ಚೆ ಮಾಡುತ್ತಿದ್ದರು. ಅದೇ ತಾನೆ ಕೆಲಸಕ್ಕೆ ಸೇರಿದ ಟ್ರೈನೀ ಇದನ್ನೆಲ್ಲಾ ಗಮನಿಸಿ ಏನಾಯಿತೆಂದು ವಿಚಾರಿಸಲು ಹಿರಿಯ ಸಹೋದ್ಯೋಗಿಯನ್ನು ಕೇಳಿದ: ಏನು ನಡೆಯುತ್ತಿದೆ ಇಲ್ಲಿ?
ಹಿರಿಯ ಸಹೋದ್ಯೋಗಿ: 'ಭಯೋತ್ಪಾದಕರು, ಬಾಸ್‌ನನ್ನು ಕಿಡ್ನಾಪ್ ಮಾಡಿದ್ದಾರೆ. ಬಿಡುಗಡೆಗಾಗಿ 1 ಕೋಟಿ ರೂಪಾಯಿಯ ಬೇಡಿಕೆ ಇಟ್ಟಿದ್ದಾರೆ. ಇಲ್ಲದಿದ್ದರೆ ಅವರನ್ನು ಪೆಟ್ರೋಲ್‌ನಲ್ಲಿ ಅದ್ದಿ ಆಮೇಲೆ ಬೆಂಕಿ ಹಚ್ಚುತ್ತಾರಂತೆ. ಆದ್ದರಿಂದ ಪ್ರತಿಯೊಬ್ಬ ನೌಕರರ ಟೇಬಲ್ ಬಳಿ ಹೋಗಿ ಹಣ ಸಂಗ್ರಹಿಸುತ್ತಿದ್ದಾರೆ.'
ಟ್ರೈನಿ: ಒಬ್ಬೊಬ್ಬರು ಅಂದಾಜು ಎಷ್ಟು ಕೊಡುತ್ತಿದ್ದಾರೆ?
ಹಿರಿಯ ಸಹೋದ್ಯೋಗಿ: ಒಂದು ಲೀಟರ್ ಪೆಟ್ರೋಲ್!



ಸಂಗ್ರಹ:
**ವಿದ್ಯಾ ವಿ ಹಾಲಭಾವಿ**

**ಸುಧಾ**
**ರಸಪ್ರಶ್ನೆ ಫಲಿತಾಂಶ**

**10ನೇ ವಾರ (ಏಪ್ರಿಲ್14)**
1) ಎಚ್.ಎಂ.ವಿನೋದ್ ಆಶ್ರಯ ಬೆಂಗಳೂರು
2) ಜಿ.ಚಂದ್ರಶೇಖರ್ ಬೆಂಗಳೂರು
3) ಎಚ್.ಸಿ.ಬಿರಾದಾರ್ ಗುಲ್ಬರ್ಗ
4) ಎಸ್.ಕಿರಣ್ ದಾವಣಗೆರೆ ಜಿಲ್ಲೆ
5) ಎಚ್.ಎಂ.ಮಾನಸ ತುಮಕೂರು
6) ಚಂದನ ಆರ್. ರಾವ್ ಬೆಂಗಳೂರು
7) ಬಸನಗೌಡ ಎಚ್ .ಹುಲಿಮನಿ ಹುಬ್ಬಳ್ಳಿ
8) ಎ.ಪಿ.ಸುರೇಂದ್ರಕುಮಾರ್ ಮೈಸೂರು ಜಿಲ್ಲೆ
9) ಸತೀಶ್ ರಾಮಕೃಷ್ಣ ದೊಂಗಾಡೆ ಶಿರಸಿ
10) ಎಚ್.ಎಸ್ .ಹರಿಸರ್ವೋತ್ತಮ ಮೈಸೂರು

**11ನೇ ವಾರ (ಏ. 28)**
1) ಎಂ.ಮಲ್ಲಮ್ಮ ಮೈಸೂರು
2) ಸಂಜೀವ್ ಕುಮಾರ್ ಧಾರವಾಡ ಜಿಲ್ಲೆ
3) ಜಗದೀಶ್ ಮಂಕಾವಿ ಧಾರವಾಡ ಜಿಲ್ಲೆ
4) ಡಾ.ನಾಗರಾಜ್ ಕಣಗಾಲ್ ಬೀದರ್
5) ಬಿ.ಪಿ.ಅರವಿಂದ ಬೆಂಗಳೂರು
6) ಡಾ.ರಾಘವೇಂದ್ರ ಶಿವಮೊಗ್ಗ ಜಿಲ್ಲೆ
7) ದತ್ತಾತ್ರೇಯ ಕುಲಕರ್ಣಿ ಬೆಂಗಳೂರು
8) ಲಿಯೋ ವರ್ಗೀಸ್ ಶಿವಮೊಗ್ಗ ಜಿಲ್ಲೆ
9) ದೇವೇಂದ್ರ ಹನುಮಂತಪ್ಪ ಕೊಪ್ಪಳ ಜಿಲ್ಲೆ
10) ಆರ್.ಡಿ.ನಂದಕುಮಾರ್ ಬೆಂಗಳೂರು

**12 ನೇ ವಾರ (ಮೇ 12)**
1) ಎಸ್.ಸುಶ್ಮಿತಾ ಉಡುಪಿ
2) ಎಲ್.ಕಿರಣ್ ಮೈಸೂರು
3) ಬಿ.ಚಂದ್ರೇಗೌಡ ಬೆಂಗಳೂರು
4) ಕೆ.ಸಿ.ನವೀನ್ ದಾವಣಗೆರೆ
5) ಪ್ರತಾಪ್ ರೆಡ್ಡಿ ಚಿತ್ರದುರ್ಗ
6) ಶ್ರೀಧರ್ ಕೆ. ಆಗಡಿ ಹಾವೇರಿ
7) ಸಂಗಪ್ಪ ನೂರೊಂದಪ್ಪ ಬಾಗಲಕೋಟೆ
8) ಎಂ.ಶಂಕರಮೂರ್ತಿ ತಿ.ನರಸೀಪುರ
9) ಡಿ.ಉಮೇಶ್ ಸುಳ್ಯ ತಾಲ್ಲೂಕು
10) ಎಸ್.ಚಿತ್ರಾ ಬೆಂಗಳೂರು